STD
22-2-22

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತ ಹೊಂದಿದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 82 (645) |
| ಉತ್ತರಿಸಬೇಕಾದ ದಿನಾಂಕ | 22.02.2022 |
| ಉತ್ತರಿಸಬೇಕಾದ ಸಚಿವರು | ನಗರಾಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ರಾಜ್ಯದಲ್ಲಿ ಕುಡಿಯುವ ನೀರು ಸರಬರಾಜಿನ ಯೋಜನೆಗಳು ಯಾವ ಯಾವ ನಗರಗಳಲ್ಲಿ ನಡೆಯುತ್ತಿದೆ. (ಪ್ರಗತಿಯ ವಿವರ ಅಂಕಿ-ಅಂಶ ಸಹಿತ ಮಾಹಿತಿ ಒದಗಿಸುವುದು) | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಪ್ರಸ್ತುತ ರಾಜ್ಯದಲ್ಲಿ ಒಟ್ಟಾರೆ 50 ಕುಡಿಯುವ ನೀರು ಸರಬರಾಜು ಯೋಜನೆಯನ್ನು ಮಂಡಳಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇವುಗಳ ಪೈಕಿ ರಾಜ್ಯ ಯೋಜನಾ ಕಾರ್ಯಕ್ರಮದಡಿಯಲ್ಲಿ 32 ಕುಡಿಯುವ ನೀರು ಸರಬರಾಜು ಯೋಜನೆ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ 18 ಕುಡಿಯುವ ನೀರು ಸರಬರಾಜು ಯೋಜನೆಗಳು ಒಳಗೊಂಡಿರುತ್ತದೆ. ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.<br><br>**ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್.ಕೆ.ಯು.ಎಸ್.ಐ.ಪಿ)**<br>ಎಡಿಬಿ ನೆರವಿನ ಎನ್‌ಕೆಯುಎಸ್‌ಐಪಿ ಯೋಜನೆಯಡಿಯಲ್ಲಿ ಪ್ರಸ್ತುತ ಮುಂದುವರೆದ ಕುಡಿಯುವ ನೀರು ಸರಬರಾಜು ಕಾಮಗಾರಿ ಗದಗ-ಬೆಟಗೇರಿ, ಹಾವೇರಿ, ಬಳ್ಳಾರಿ, ರಾಯಚೂರು, ಹೊಸಪೇಟೆ, ಸಿಂಧನೂರು ಮತ್ತು ಯಾದಗಿರಿ ನಗರಗಳಲ್ಲಿ ಪ್ರಗತಿಯಲ್ಲಿರುತ್ತದೆ. ವಿವರ ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br><br>**ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಕಾರ್ಯಕ್ರಮದಡಿ (ಕ್ವಿಮಿಪ್ - ಜಲಸಿರಿ)** ರಾಜ್ಯದ ಆಯ್ದ ಎಂಟು (8) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕ್ವಿಮಿಪ್ ಯೋಜನೆಯನ್ನು 2 ಟ್ರಾಂಚ್‌ಗಳಾಗಿ ವಿಂಗಡಿಸಲಾಗಿದ್ದು,<br><br>ಟ್ರಾಂಚ್-1 (ದಾವಣಗೆರೆ) ನಾಲ್ಕು (4) ನಗರ ಸ್ಥಳೀಯ ಸಂಸ್ಥೆಗಳಾದ ದಾವಣಗೆರೆ, ಹರಿಹರ, ರಾಣೆಬೆನ್ನೂರು ಮತ್ತು ಬ್ಯಾಡಗಿ ನಗರ/ಪಟ್ಟಣಗಳನ್ನು ಒಳಗೊಂಡಿರುತ್ತದೆ. |

ಟ್ರ್ಯಾಂಚ್-2 (ಮಂಗಳೂರು) ನಾಲ್ಕು (4) ನಗರ ಸ್ಥಳೀಯ ಸಂಸ್ಥೆಗಳಾದ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ ನಗರ/ಪಟ್ಟಣಗಳನ್ನು ಒಳಗೊಂಡಿರುತ್ತದೆ.
ಕ್ವಿಮಿಪ್ ಯೋಜನೆಗಳ ಪ್ರಗತಿಯ ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

**ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕೆಯುಡಬ್ಲ್ಯೂಎಸ್ಎಂಪಿ)**ಯಲ್ಲಿ ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ವ್ಯಾಪ್ತಿ ಪ್ರದೇಶಗಳಿಗೆ ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ- ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24x7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತ್ತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ|| ಎಲ್ & ಟಿ ಲಿಮಿಟೆಡ್, ಚೆನ್ನೈ ರವರಿಗೆ ಜೂನ್ 2020 ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಯೋಜನೆಯನ್ನು ವಿಶ್ವಬ್ಯಾಂಕ್ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು, ವಿಶ್ವ ಬ್ಯಾಂಕಿನ ನೆರವು ಶೇ.67% ರಷ್ಟು (ರೂ.1209.00 ಕೋಟಿ) ಇರುತ್ತದೆ. ರಾಜ್ಯ ಸರ್ಕಾರದ ಪಾಲು ಶೇ.7 % ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪಾಲು ಶೇ 26% ರಾಗಿರುತ್ತದೆ.

ಕಾಮಗಾರಿಯ ವಿನ್ಯಾಸ ಮತ್ತು ಅನುಷ್ಠಾನ ಅವಧಿ ಐದು ವರ್ಷವಾಗಿದ್ದು, ನಂತರದ 7 ವರ್ಷಗಳ ಅವಧಿಯ ಕಾರ್ಯಾಚರಣೆ ಹಾಗೂ ನಿರ್ವಹಣೆ (ಒಟ್ಟು 12 ವರ್ಷಗಳು) ಯ ಜವಾಬ್ದಾರಿಯನ್ನು ವಿನ್ಯಾಸ-ನಿರ್ಮಾಣ- ಕಾರ್ಯಾಚರಣೆ- ವರ್ಗಾವಣೆ (DBOT) ಗುತ್ತಿಗೆದಾರರು ನಿರ್ವಹಿಸಬೇಕಿರುತ್ತದೆ.

ಹುಬ್ಬಳ್ಳಿ_ಧಾರವಾಡ ನಗರದಲ್ಲಿ ಯೋಜನೆಯ ಗುತ್ತಿಗೆ ಮೊತ್ತ ರೂ.1206.97 ಕೋಟಿಗಳಾಗಿದ್ದು, ಹುಬ್ಬಳ್ಳಿ-ಧಾರವಾಡ ನಗರದ ಭಾಗಶಃ ಪ್ರದೇಶಗಳನ್ನು ದಿನಾಂಕ: 15.11.2021 ರಂದು ಯೋಜನಾ ನಿಯಮಾನುಸಾರ ಹಾಲಿ ನೀರು ಸರಬರಾಜು ವ್ಯವಸ್ಥೆಯನ್ನು ಹಸ್ತಾಂತರಿಸಲಾಗಿದ್ದು, ಉಳಿದ ಪ್ರದೇಶಗಳ ಹಸ್ತಾಂತರ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. 18.60 ಕಿ.ಮೀ ಕಚ್ಚಾ ನೀರಿನ ಮತ್ತು ಶುದ್ಧ ನೀರಿನ ಪೈಪ್‌ಲೈನ್ ಅಳವಡಿಸಲಾಗಿದ್ದು, ನೀರು ಶುದ್ಧೀಕರಣ ಘಟಕಗಳು, ನೆಲ/ಮೇಲ್ಮಟ್ಟದ ನೀರು ಸಂಗ್ರಹಗಾರಗಳ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿರುತ್ತವೆ.

| | | |
|---|---|---|
| | | ಬೆಳಗಾವಿ ನಗರದಲ್ಲಿ ಯೋಜನೆಯ ಗುತ್ತಿಗೆ ಮೊತ್ತ ರೂ.804.13 ಕೋಟಿಗಳಾಗಿದ್ದು, ಗುತ್ತಿಗೆದಾರರಾದ ಮೆ\|\| ಎಲ್&ಟಿ ರವರಿಗೆ ದಿನಾಂಕ: 25.06.2021 ರಂದು ಯೋಜನಾ ನಿಯಮಾನುಸಾರ ಹಾಲಿ ನೀರು ಸರಬರಾಜು ವ್ಯವಸ್ಥೆಯನ್ನು ಹಸ್ತಾಂತರಿಸಲಾಗಿದೆ. 16.33 ಕಿ.ಮೀ ಕಚ್ಚಾ ನೀರಿನ ಮತ್ತು ಶುದ್ಧ ನೀರಿನ ಪೈಪ್‌ಲೈನ್ ಅಳವಡಿಸಲಾಗಿದ್ದು, ನೀರು ಶುದ್ಧೀಕರಣ ಘಟಕಗಳು, ನೆಲ/ಮೇಲ್ಮಟ್ಟದ ನೀರು ಸಂಗ್ರಹಗಾರಗಳ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿರುತ್ತವೆ.<br><br>ಕಲಬುರಗಿ ನಗರಗದಲ್ಲಿ ಯೋಜನೆಯ ಗುತ್ತಿಗೆ ಮೊತ್ತ ರೂ.837.43 ಕೋಟಿಗಳಾಗಿದ್ದು ಹಾಲಿ ನಿರ್ವಹಿಸುತ್ತಿರುವ ಸಂಪೂರ್ಣ ನೀರು ಸರಬರಾಜು ವ್ಯವಸ್ಥೆಯನ್ನು ಕೆಯುಬ್ಲ್ಯೂಎಸ್&ಡಿಬಿ ವತಿಯಿಂದ ಹಿಂಪಡೆದು ಸಂಬಂಧಪಟ್ಟ ಮಹಾನಗರ ಪಾಲಿಕೆಗಳ ಮುಖಾಂತರ ಗುತ್ತಿಗೆದಾರರಾದ ಮೆ\|\| ಎಲ್&ಟಿ ರವರಿಗೆ ಕ್ರಮವಾಗಿ ದಿನಾಂಕ:08.07.2021 ರಂದು ಹಸ್ತಾಂತರಿಸಲಾಗಿದೆ. ಸರ್ವೆ ಕಾರ್ಯಗಳು ಮುಕ್ತಾಯಗೊಂಡಿದ್ದು, ಯೋಜನೆಯ ವಿನ್ಯಾಸ ಪ್ರಗತಿಯಲ್ಲಿರುತ್ತದೆ.<br><br>ಸದರಿ ಯೋಜನಾ ವ್ಯಾಪ್ತಿಯ 3 ಪಟ್ಟಣಗಳಿಗೆ 2020-21ನೇ ಸಾಲಿನಿಂದ 2021-22 ಸಾಲಿನವರೆಗೆ ಒಟ್ಟು 433.62 ಕೋಟಿ ರೂ.ಗಳ ಅನುದಾನ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ್ದು. ಈ ಪೈಕಿ ರೂ.356.36 ಕೋಟಿಗಳು ಈವರೆಗೆ ವೆಚ್ಚವಾಗಿರುತ್ತದೆ. ಸದರಿ ಯೋಜನೆಯು ಜೂನ್-2020ರಂದು ಪ್ರಾರಂಭವಾಗಿದ್ದು, ಗುತ್ತಿಗೆ ಅವಧಿಯು 12 ವರ್ಷಗಳಾಗಿದ್ದು, 2032ಕ್ಕೆ ಅಂತಿಮಗೊಳ್ಳಲಿದೆ.<br><br>**ಕರ್ನಾಟಕ ಪೌರ ಸುಧಾರಣ ಯೋಜನೆಯ (ಕೆಎಮ್‌ಆರ್‌ಪಿ)**<br>ರಾಜ್ಯ ಸರ್ಕಾರದ ಅನುದಾನದಲ್ಲಿ ಮುಂದುವರೆದ ಕೆಎಂಆರ್‌ಪಿ ಯೋಜನೆಯಡಿ ಪ್ರಸ್ತುತ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ನಗರಕ್ಕೆ 24/7 ನಿರಂತರ ನೀರು ಸರಬರಾಜು ಯೋಜನೆಗೆ ಸರ್ಕಾರದ ಆದೇಶ ದಿನಾಂಕ: 04.06.2016 ರಲ್ಲಿ ಅನುಮೋದನೆ ನೀಡಲಾಗಿದ್ದು, ರೂ.65.91 ಕೋಟಿ ಮೊತ್ತಕ್ಕೆ ಗುತ್ತಿಗೆ ನೀಡಲಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಕಾಮಗಾರಿಯ ಅನುಷ್ಠಾನ ಪ್ರಗತಿಯಲ್ಲಿರುತ್ತದೆ. |

| ಭೌತಿಕ | | ಆರ್ಥಿಕ (ರೂ.ಕೋಟಿಗಳಲ್ಲಿ) | | ಪ್ರಸ್ತುತ |
|---|---|---|---|---|
| ಗುರಿ | ಪ್ರಗತಿ | ಗುರಿ | ಪ್ರಗತಿ | |
| ನೆಟ್‌ವರ್ಕ್ ಜಾಲ 205 ಕಿ.ಮೀ. | 188 ಕಿ.ಮೀ. | 55.06 (ಸ್ಥಳೀಯ ಸಂಸ್ಥೆಯ ಮೂಲಕ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ರೂ.10.85 ಕೋಟಿ ಹೊರತುಪಡಿಸಿ) | 35.01 | ಸದರಿ ಕಾಮಗಾರಿಯನ್ನು ದಿನಾಂಕ 25.04.2019 ರಂದು ಗುತ್ತಿಗೆ ನೀಡಲಾಗಿದ್ದು, ಪ್ರಸ್ತುತ ನಿರ್ಮಾಣ ಕಾಮಗಾರಿಯ ಪ್ರಗತಿಯಲ್ಲಿದ್ದು, ದಿನಾಂಕ 31.05.2022 ರೊಳಗೆ ಪೂರ್ಣಗೊಳ್ಳುವ ನಿರೀಕ್ಷಿಸಿದೆ. ತದನಂತರ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ನಗರಸಭೆ ವತಿಯಿಂದ ನೀರಿನ ಕರ ಸಂಗ್ರಹಣೆ ಮೂಲಕ ಕೈಗೊಳ್ಳುವ ಗುರಿ ಹೊಂದಿದೆ. |
| ಗೃಹ ಸಂಪರ್ಕಗಳು 16000 | 11600 | | | |
| ಒಹೆಚ್‌ಟಿ 6 7.50 ಕಿ.ಲೀ. | ಪ್ರಗತಿಯಲ್ಲಿರುತ್ತದೆ | | | |
| ಪಂಪ್‌ಹೌಸ್ 1 | | | | |
| ಪಂಪ್‌ಗಳ ಬದಲಿ ಜೋಡಣೆ/ ರಿಪೇರ್ 4 | | | | |

## 9 ಪಟ್ಟಣಗಳ ನೀರು ಸರಬರಾಜು ಯೋಜನೆ

- ಕರ್ನಾಟಕ ಸರ್ಕಾರವು ಪರಿಷ್ಕೃತ ಸರ್ಕಾರಿ ಆದೇಶ ಸಂಖ್ಯೆ : ನ.ಅ.ಇ 14 ಪಿಆರ್‌ಜೆ 2012, ದಿನಾಂಕ 15.12.2017 ರಲ್ಲಿ 9 ಪಟ್ಟಣಗಳಿಗೆ ರೂ.205.87 ಕೋಟಿ ಅಂದಾಜು ವೆಚ್ಚದಲ್ಲಿ ನೀರು ಸರಬರಾಜು ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ ನೀಡಿದೆ.
- ನೀರು ಸರಬರಾಜು ಉನ್ನತೀಕರಣ ಯೋಜನೆಯ ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಶೇ.50ರಷ್ಟು ಅನುದಾನ ಮತ್ತು ಶೇ.50ರಷ್ಟು ಮಾರುಕಟ್ಟೆ ಸಾಲದಿಂದ ಅನುಷ್ಠಾನಗೊಳಿಸಲಾಗುತ್ತಿದೆ.
- 9 ಪಟ್ಟಣಗಳ ಯೋಜನೆಯಡಿ ಮುಲ್ಕಿ, ಮುಂಡರಗಿ, ಕೊಟ್ಟೂರು, ತೆಕ್ಕಲಕೋಟೆ, ತೆರದಾಳ್, ಮಹಾಲಿಂಗಪುರ, ಕಂಪ್ಲಿ, ಮುದಗಲ್ ಮತ್ತು ಕೆ.ಆರ್ ಪೇಟೆ ಪಟ್ಟಣಗಳಿಗೆ ಕುಡಿಯುವ ನೀರಿಗೆ ಸಂಬಂಧಿಸಿದ ಮೂಲ ಸೌಕರ್ಯಗಳನ್ನು ಕೈಗೊಳ್ಳಲಾಗಿರುತ್ತದೆ.

| | | |
|---|---|---|
| | | • ಕಂಪ್ಲಿ ಪಟ್ಟಣದಲ್ಲಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>• ಮುಲ್ಕಿ ಪಟ್ಟಣದಲ್ಲಿ ಟ್ರಯಲ್ ರನ್ ಪೂರ್ಣಗೊಂಡಿದ್ದು, ಪಣಂಬೂರ್ ಡಬ್ಲೂ.ಟಿ.ಪಿ ಯಿಂದ 3 ಎಂ.ಎಲ್.ಡಿ ನೀರನ್ನು ಮಂಗಳೂರು ಮಹಾನಗರ ಪಾಲಿಕೆ ರವರು ಒದಗಿಸ ಬೇಕಾಗಿದೆ.<br>• ಮಹಾಲಿಂಗಪುರ ಪಟ್ಟಣದಲ್ಲಿ ಟ್ರಯಲ್ ರನ್ ಪ್ರಗತಿಯಲ್ಲಿರುತ್ತದೆ ಮತ್ತು ಉಳಿದ ಪಟ್ಟಣಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಪ್ರಗತಿಯ ವಿವರ ಅಂಕಿ-ಅಂಶಗಳನ್ನು ಅನುಬಂಧ - 4 ರಲ್ಲಿ ನೀಡಲಾಗಿದೆ.<br><br>ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಆಯ್ಕೆಯಾದ 25 ನಗರಗಳಲ್ಲಿ ಶುದ್ಧ ಕುಡಿಯುವ ನೀರನ್ನು ಪೂರೈಸುವ ಯೋಜನೆಗೆ ಬಿಡುಗಡೆಯಾಗಿರುವ ಒಟ್ಟು ಅನುದಾನ ರೂ. 18.21 ಕೋಟಿ ಹಾಗೂ ಒಟ್ಟು ವೆಚ್ಚ ರೂ. 1794.19 ಕೋಟಿಗಳಾಗಿರುತ್ತದೆ. ವಿವರಗಳನ್ನು ಅನುಬಂಧ-5 (ಅಮೃತ್) ರಲ್ಲಿ ನೀಡಲಾಗಿದೆ. ಪ್ರಸ್ತುತ ರಾಜ್ಯದಲ್ಲಿ ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಡೆಯುವ ಅಂಕಿ-ಅಂಶ ವಿವರ ಅನುಬಂಧ-6 ರಲ್ಲಿ ನೀಡಲಾಗಿದೆ. |
| ಆ) | ಕುಡಿಯುವ ನೀರಿನ ಕೊರತೆ ಅನುಭವಿಸುತ್ತಿರುವ ನಗರಗಳ ಪಟ್ಟಿ ಒದಗಿಸುವುದು; ಈ ಕೊರತೆ ತುಂಬಲು ಕೊಳವೆಬಾವಿ ಹೊರತುಪಡಿಸಿ ಬೇರೆ ಯೋಜನೆಗಳನ್ನು ರೂಪಿಸಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು? (ಹಾಗಿದ್ದಲ್ಲಿ ವಿವರ ಒದಗಿಸುವುದು) | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ರಾಜ್ಯದಲ್ಲಿ ಪ್ರಸ್ತುತ ಒಟ್ಟಾರೆ 314 ಸ್ಥಳೀಯ ಸಂಸ್ಥೆಗಳಲ್ಲಿ 71 ನಗರಗಳಿರುತ್ತವೆ. ಇದರಲ್ಲಿ 10 ಮಹಾನಗರ ಪಾಲಿಕೆಗಳು ಮತ್ತು 61 ನಗರಸಭೆಗಳು ಒಳಗೊಂಡಿರುತ್ತದೆ. ರಾಜ್ಯದ ಕುಡಿಯುವ ನೀರಿನ ಕೊರತೆಯನ್ನು ಅನುಭವಿಸುತ್ತಿರುವ 28 ನಗರಗಳಿದ್ದು ಕೊರತೆಯನ್ನು ನೀಗಿಸಲು ಮಂಡಳಿ ವತಿಯಿಂದ ತೆಗೆದುಕೊಂಡ ಕ್ರಮದ ಮಾಹಿತಿಯನ್ನು ಅನುಬಂಧ-7 ರಲ್ಲಿ ನೀಡಲಾಗಿದೆ. ರಾಜ್ಯದ ಮಹಾನಗರ ಪಾಲಿಕೆ/ನಗರಗಳಾದ ರಾಬರ್ಟ್ಸನ್ ಪೇಟೆ, ಮಂಡ್ಯ, ರಾಮನಗರ, ಚನ್ನಪಟ್ಟಣ, ಬಿಜಾಪುರ ಮತ್ತು ಶಿವಮೊಗ್ಗ ನಗರಗಳಲ್ಲಿ ಮಂಡಳಿ ವತಿಯಿಂದ ಗ್ರಾಹಕರ ಹಂತದವರೆಗೆ ಕುಡಿಯುವ ನೀರು ವ್ಯವಸ್ಥೆಯ ನಿರ್ವಹಣೆಯನ್ನು ನಿರ್ವಹಿಸುತ್ತಿದೆ.<br><br>ಮಂಡಳಿಯು ರಾಜ್ಯದ ಸ್ಥಳಿಯ ಸಂಸ್ಥೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವ ಜವಾಬ್ಧಾರಿಯನ್ನು ಹೊಂದಿರುತ್ತದೆ. ಸದರಿ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನದ ನಂತರ ಸಂಬಂದಪಟ್ಟ ನಗರ ಸ್ಥಳೀಯ ಸಂಸ್ಥೆಗೆ ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸಲಾಗುತ್ತದೆ. |

**ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್.ಕೆ.ಯು.ಎಸ್.ಐ.ಪಿ)** ಯೋಜನೆಯಡಿಯಲ್ಲಿ 15 ಪಟ್ಟಣಗಳಾದ ದಾವಣಗೆರೆ, ಚಾಮರಾಜನಗರ, ಇಳಕಲ್, ಗೋಕಾಕ್, ನಿಪ್ಪಾಣಿ, ಬೀದರ್, ಬಸವಕಲ್ಯಾಣ, ಶಹಬಾದ್, ಯಾದಗೀರ್, ಹಾವೇರಿ, ಗದಗ-ಬೆಟಗೇರಿ, ಬಳ್ಳಾರಿ, ಹೊಸಪೇಟೆ, ಸಿಂಧನೂರು ಮತ್ತು ರಾಯಚೂರು ನಗರಗಳಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿತ್ತು.

- ಸಂಪೂರ್ಣಗೊಂಡ ಕಾಮಗಾರಿಗಳು: 8 ಪಟ್ಟಣಗಳಲ್ಲಿ ದಾವಣಗೆರೆ ಮತ್ತು ಚಾಮರಾಜನಗರದ ಸಗಟು ನೀರು ಸರಬರಾಜು ಕಾಮಗಾರಿ ಪೂರ್ಣಗೊಳಿಸಿ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರರಿಸಲಾಗಿದೆ. ಉಳಿದ 6 ಪಟ್ಟಣಗಳಾದ ಇಳಕಲ್, ಗೋಕಾಕ್, ಬೀದರ್, ಬಸವಕಲ್ಯಾಣ, ನಿಪ್ಪಾಣಿ ಮತ್ತು ಶಹಬಾದ್ ನಗರಗಳ 24/7 ನೀರು ಸರಬರಾಜು ಕಾಮಗಾರಿ ಪೂರ್ಣಗೊಂಡು ಕೆಲವು ನಿರ್ವಹಣೆ ಸಂಬಂದಿತ ಸಣ್ಣ ಪುಟ್ಟ ಕಾಮಗಾರಿ ಹೊರತುಪಡಿಸಿ ಗುತ್ತಿಗೆದಾರರು ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸುತ್ತಿರುತ್ತಾರೆ.
- ಪ್ರಗತಿಯಲ್ಲಿರುವ ಕಾಮಗಾರಿಗಳು: ಹಾವೇರಿ, ಗದಗ-ಬೆಟಗೇರಿ, ಹೊಸಪೇಟೆ, ಬಳ್ಳಾರಿ, ಸಿಂಧನೂರು ಮತ್ತು ರಾಯಚೂರು ಪಟ್ಟಣಗಳಲ್ಲಿ ನಿರ್ಮಾಣ ಕಾಮಗಾರಿ ಅಂತಿಮ ಹಂತದಲ್ಲಿರುತ್ತದೆ. ಯಾದಗಿರಿ ಪಟ್ಟಣದಲ್ಲಿ ಪ್ರಾಯೋಗಿಕವಾಗಿ ಚಾಲನೆಯಲ್ಲಿದೆ.

ಪ್ರಸ್ತುತ ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಕೈಗೊಂಡಿರುವ 15 ನಗರ/ ಪಟ್ಟಣಗಳ ಪೈಕಿ ಬೀದರ್, ಹಾವೇರಿ ಹಾಗು ಯಾದಗಿರಿ ಪಟ್ಟಣಗಳಲ್ಲಿ ಸಗಟು ನೀರು ಸರಬರಾಜುವಿನಲ್ಲಿ ಕೊರತೆ ಇರುತ್ತದೆ.

1. ಬೀದರ್ ನಗರದಲ್ಲಿ ಸದರಿ ಯೋಜನೆಯನ್ನು ವಿನ್ಯಾಸಿಸುವ ಸಮಯದಲ್ಲಿ ಬೀದರ್ ನಗರಕ್ಕೆ ಕಾರಂಜಾ ಜಲಾಶಯ ಮತ್ತು ಮಾಂಜ್ರಾ ನದಿ ಮೂಲದಿಂದ ಸಗಟು ನೀರು ಸರಬರಾಜು ಮಾಡಲಾಗುತ್ತಿತು, ೨೦೧೪ರಿಂದ ಮಾಂಜ್ರಾ ನದಿಯು ಬೇಸಿಗೆ ಸಮಯದಲ್ಲಿ ಬತ್ತಿಹೋಗುತ್ತಿರುತ್ತದೆ. ಹಾಗೂ ಇದರ ನಿರ್ವಹಣೆಯನ್ನು ಕೆ.ಯು.ಡಬ್ಲ್ಯೂ.ಎಸ್.&. ಡಿ.ಬಿ ವತಿಯಿಂದ ಸ್ಥಗಿತಗೊಳಿಸಲಾಗಿದೆ. ಕಾರಂಜಾ ಜಲಾಶಯ ಮೂಲದಿಂದ ಮಾತ್ರ ನೀರು ಸರಬರಾಜು ಮಾಡಲಾಗುತ್ತಿದೆ, ಇದರಿಂದ ಅಗತ್ಯಕ್ಕಿಂತ ಕಡಿಮೆ ಪ್ರಮಾಣದ ಸಗಟು ನೀರು ಸರಬರಾಜುವಿನಲ್ಲಿ ಕೊರತೆ ಇರುತ್ತದೆ. ಇದನ್ನು ಉತ್ತಮಪಡಿಸಲು ಕಾರಾಂಜ ಜಲಾಶಯ ಮೂಲದಿಂದಲೇ ಯಂತ್ರೋಪಕರಣಗಳನ್ನು ಉನ್ನತೀಕರಿಸಿ ಹೆಚ್ಚುವರಿ ನೀರನ್ನು ಒದಗಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

| | | |
|---|---|---|
| | | 2. ಹಾವೇರಿ ನಗರಕ್ಕೆ ವರದಾನದಿಯ ಕರ್ಜಗಿ ಮೂಲ ಹಾಗು ತುಂಗಭದ್ರಾ ನದಿಯ ಕಂಚರಗಟ್ಟಿ ಮೂಲಗಳಿಂದ ಕಚ್ಚಾ ನೀರನ್ನು ಪಂಪು ಮಾಡಿ ಶುದ್ಧೀಕರಿಸಿ ನಾಗರೀಕರಿಗೆ ನೀರು ಸರಬರಾಜು ಮಾಡುವ ವ್ಯವಸ್ಥೆ ಇರುತ್ತದೆ. ಜನವರಿ ಮಾಹೆ ಇಂದ ವರದಾ ನದಿಯು ಬತ್ತಿಹೋಗುವ ಕಾರಣ ಈ ಮೂಲದಿಂದ ನೀರು ದೊರೆಯುವುದಿಲ್ಲ. ಇದಲ್ಲದೆ, ತುಂಗಭದ್ರಾ ನದಿಯ ಕಂಚರಗಟ್ಟಿ ಮೂಲದಿಂದ ಪಂಪು ಮಾಡುವ ಮುಖ್ಯ ಕೊಳವೆಗೆ 5 ಸ್ಥಳಗಳಲ್ಲಿ ಗ್ರಾಮಾಂತರ ಪ್ರದೇಶಗಳು ಅನಧಿಕೃತವಾಗಿ ತೂತು ಮಾಡಿ ನೀರನ್ನು ಪಡೆಯುತ್ತಿರುವ ಕಾರಣ ಹಾವೇರಿ ನಗರಕ್ಕೆ ನೀರಿನ ಕೊರತೆ ಇರುತ್ತದೆ. ನಗರಸಭೆಯವರು 5 ಸ್ಥಳಗಲ್ಲಿರುವ ಅನಧಿಕೃತ ಸಂಪರ್ಕಗಳನ್ನು ಕಡಿತಮಾಡಿ ನೀರು ಪೋಲಾಗುವುದನ್ನು ತಡೆಗಟ್ಟಿದಲ್ಲಿ ಹಾವೇರಿ ನಗರದ ಸಗಟು ನೀರು ಸರಬರಾಜಿನ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಬಹುದು.<br>3. ಯಾದಗಿರಿ ನಗರದಲ್ಲಿ ಸಮರ್ಪಕ ನಿರ್ವಹಣೆ (ಪಂಪ್ ದುರಸ್ತಿ) ಕೊರತೆಯಿಂದ ಸಗಟು ನೀರು ಸರಬರಾಜುವಿನ ವೆತ್ಯಯದಿಂದ ಕುಡಿಯುವ ನೀರು ಸರಬರಾಜುವಿನಲ್ಲಿ ಕೊರತೆ ಇರುತ್ತದೆ.<br><br>ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆಯಡಿ:<br>1. ಕೊಳವೆ ಬಾವಿಗಳನ್ನು ಆಳಗೊಳಿಸುವುದು/ ಸ್ವಚ್ಛಗೊಳಿಸುವುದು.<br>2. ಹೈಡ್ರೋಫ್ಯಾಕ್ಚರಿಂಗ್<br>3. ನೀರು ಸರಬರಾಜು ಪೈಪುಗಳ ದುರಸ್ಥಿ/ ಬದಲಾವಣೆ<br>4. ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಹಾಗೂ ಪಂಪು ಮೋಟಾರ್ ಅಳವಡಿಸುವ ಕಾಮಗಾರಿ.<br>5. ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಅವಶ್ಯವಿರುವ ಪಂಪು ಮೋಟಾರ್, ಪೈಪ್ ಲೈನ್ ಮತ್ತು ಇತರ ಸಲಕರಣೆಗಳ ಸಂಗ್ರಹಣೆ ಮೊದಲಾದ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. |

ಸಂಖ್ಯೆ: ನಅಇ 28 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**